■ ಹನಿ

## ಆತ್ಮಸಾಕ್ಷಿಯ ಖೈದಿ

ಎಲ್ಲೆಡೆ ಈಗ ಉಪವಾಸ ಹಿಡಿಯುವವರದ್ದೇ ಸುದ್ದಿ. ಅಣ್ಣಾ ಹಜಾರೆಯವರ ಉಪವಾಸ 'ಸೂಪರ್ ಸಕ್ಸಸ್' ಆದ ಬಳಿಕ ಉಪವಾಸಕ್ಕೆ ಡಿಮ್ಯಾಂಡ್ ಹೆಚ್ಚಾಗಿದೆ. ನರೇಂದ್ರ ಮೋದಿಯಂತವರು ಉಪವಾಸವನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡದ್ದೂ ಆಯಿತು. ಆದರೆ ಈ ಹುಡುಗಿ, ಮಣಿಪುರದ ಇರೋಮ್ ಚಾನು ಶರ್ಮಿಳಾ ಮಾತ್ರ 'ಉಪವಾಸ'ವನ್ನು ನಿಜಕ್ಕೂ ಸತ್ಯಾಗ್ರಹದಂತೆಯೇ ನಡೆಸುತ್ತಿದ್ದಾಳೆ. ಈಕೆ ಉಪವಾಸ ಆರಂಭಿಸಿದ್ದು 2000ನೇ ಇಸವಿಯ ಏಪ್ರಿಲ್ 2ರಂದು. ಅದಕ್ಕೆ ಎರಡು ದಿನಗಳ ಹಿಂದೆ ಮಣಿಪುರದ ಮಲೋವನ್ ಎಂಬ ಪಟ್ಟಣದಲ್ಲಿ ಅಸ್ಸಾಂ ರೈಫಲ್ಸ್‌ನ ಯೋಧರು ಹತ್ತು ನಾಗರಿಕರನ್ನು ಗುಂಡಿಟ್ಟು ಕೊಂದಿದ್ದರು. ಸಶಸ್ತ್ರ ಪಡೆಗಳ (ವಿಶೇಷ ಹಕ್ಕು) ಕಾಯ್ದೆ–1958ರ ಪ್ರಕಾರ, ಸೈನಿಕರು ಯಾರನ್ನು ಬೇಕಿದ್ದರೂ ಅನಿರ್ದಿಷ್ಟ ಅವಧಿಗೆ ಬಂಧಿಸಬಹುದಿತ್ತು. 'ಇದು ಮಾನವ ಹಕ್ಕುಗಳ ಉಲ್ಲಂಘನೆ– ಈ ಕಾಯ್ದೆ ರದ್ದುಗೊಳಿಸಿ' ಎಂಬ ಒಂದೇ ಬೇಡಿಕೆಯನ್ನಿಟ್ಟು ಇರೋಮ್ ಶರ್ಮಿಳಾ ಉಪವಾಸ ಸತ್ಯಾಗ್ರಹ ಆರಂಭಿಸಿದಳು. ಕಾಯ್ದೆ ಈವರೆಗೆ ರದ್ದಾಗಿಲ್ಲ; ಆಕೆಯ ಉಪವಾಸ ನಿಂತಿಲ್ಲ. ಪೊಲೀಸರ ಬಂಧನಕ್ಕೂ ಆಕೆ ಬಗ್ಗಿಲ್ಲ.

ಇಂಫಾಲದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲಿ ಈಕೆಯೀಗ



ಸರಕಾರದ ಖೈದಿ. 10–12 ಅಡಿ ಉದ್ದಗಲದ ಕೋಣೆಯಲ್ಲಿ ಮಲಗಿರುವ ಆಕೆಗೆ ಬಲವಂತದಿಂದ ಮೂಗಿನ ಮೂಲಕ ದ್ರವಾಹಾರ ನೀಡಲಾಗುತ್ತಿದೆ. 'ಸಶಸ್ತ್ರ ಪಡೆಗಳ ವಿಶೇಷ ಹಕ್ಕು ಕಾಯ್ದೆ ರದ್ದು ಮಾಡದೇ ಒಂದು ಗುಟುಕು ನೀರು ಕೂಡಾ ಕುಡಿಯುವುದಿಲ್ಲ' ಎನ್ನುವ ಪ್ರತಿಜ್ಞೆಯನ್ನು ಆಕೆ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾಳೆ. 'ಬೆಳಿಗ್ಗೆ ಹಲ್ಲುಜ್ಜು-ವಾಗ ಕೂಡಾ ಗುಟುಕು ನೀರು ಬಾಯೊಳಕ್ಕೆ ಹೋಗಬಾರದು' ಎಂದು ಹತ್ತಿಯಿಂದಲೇ ಹಲ್ಲು ಕ್ಲೀನ್ ಮಾಡುತ್ತಿದ್ದಾಳೆ. ಪೊಲೀಸರು 15 ದಿನಕ್ಕೊಮ್ಮೆ ಆಕೆಯನ್ನು ಕೋರ್ಟ್‌ಗೆ ಒಯ್ಯುತ್ತಾರೆ, ಬಂಧನದ ಅವಧಿಯನ್ನು ವಿಸ್ತರಿಸುತ್ತಾರೆ. ಕಳೆದ 11 ವರ್ಷಗಳಿಂದ ಹೀಗೆಯೇ ನಡೆದುಕೊಂಡು ಬಂದಿದೆ!

ಮಾನವ ಹಕ್ಕುಗಳ ಸಂಘಟನೆಗಳು ಶರ್ಮಿಳಾ ಬೆಂಬಲಕ್ಕೆ ನಿಂತಿವೆ. 2007ರ ಗ್ವಾಂಗ್ಜು ಮಾನವ ಹಕ್ಕು ಪುರಸ್ಕಾರ, ಆ ಬಳಿಕ ರವೀಂದ್ರನಾಥ ಠಾಗೋರ್ ಶಾಂತಿ ಪುರಸ್ಕಾರ– ಹೀಗೆ ಹಲವು ಪ್ರಶಸ್ತಿಗಳು ಈಕೆಗೆ ಲಭಿಸಿವೆ. ಮೈಥಿಲಿ ಮತ್ತು ಇಂಗ್ಲಿಷ್ ಭಾಷೆಯ ಕವಿತೆಗಳ ಸಂಕಲನವೊಂದನ್ನು ಪ್ರಕಟಿಸಿರುವ ಈ ಕವಯಿತ್ರಿ ಅದ್ಭುತ ಹೋರಾಟಗಾರ್ತಿ.

1972ರ ಮಾರ್ಚ್ 14ರಂದು ಜನಿಸಿರುವ ಶರ್ಮಿಳಾಗೆ ಈಗ 39 ವರ್ಷ. 15 ವರ್ಷಗಳ ಹಿಂದಿನಿಂದಲೇ ಈಕೆ ಗೋವಾ ಮೂಲದ ಬ್ರಿಟಿಷ್ ಪ್ರಜೆಯೊಬ್ಬನನ್ನು ಪ್ರೀತಿಸುತ್ತಿದ್ದಾಳಂತೆ. ಇತ್ತೀಚಿನ ಸಂದರ್ಶನವೊಂದರಲ್ಲಿ 'ಸರಕಾರ ಕಾಯ್ದೆ ರದ್ದು ಮಾಡಿದರೆ ನಾನು ಮದುವೆಯ ಬಗ್ಗೆ ಆಲೋಚಿಸ ಬಹುದು' ಎಂದು ಈಕೆ ಹೇಳಿರುವುದೀಗ ವಿವಾದದ ಕೇಂದ್ರವಾಗಿದೆ. 'ಈಕೆಯ ಹೋರಾಟವನ್ನು ಬಗ್ಗುಬಡಿಯಲು ಮಾಧ್ಯಮಗಳು ಮದುವೆಯ ಸುದ್ದಿಯನ್ನು ವಿಜೃಂಭಿಸುತ್ತಿವೆ' ಎನ್ನುವುದು ಈಕೆಯ ಬೆಂಬಲಿಗರ ವಾದ. 'ಅವರಿಗೆಲ್ಲ ಮದುವೆಯಾಗಿ, ಮಕ್ಕಳಾಗಿದೆ. ಶರ್ಮಿಳಾ ಮದುವೆಯಾಗೋದು ಬೇಡವೆ?' ಎನ್ನುವುದು ಪತ್ರಕರ್ತರ ಪ್ರಶ್ನೆ. ಉತ್ತರಿಸಬೇಕಾದ ಸರಕಾರ ಬಾಯ್ಮುಚ್ಚಿಕೊಂಡಿದೆ. ಟೀವಿಯ ತುಂಬ ನರೇಂದ್ರ ಮೋದಿಯ ಏರ್ ಕಂಡಿಷನ್ ಉಪವಾಸದ್ದೇ ಸುದ್ದಿ!



## ಬೆಕ್ಹಾಮ್ ಬದುಕಿದ್ದಾನೆ!

ಕಳೆದ ವಾರವಿಡೀ ಟ್ವಿಟ್ಟರ್ ಮತ್ತು ಫೇಸ್ ಬುಕ್‌ನಲ್ಲಿ ಡೇವಿಡ್ ಬೆಕ್ಹಾಮ್ ಸತ್ತ ಸುದ್ದಿಯದ್ದೇ ಚರ್ಚೆ. 'ಕಾರು ಅಪಘಾತವೊಂದರಲ್ಲಿ ಡೇವಿಡ್ ಬೆಕ್ಹಾಮ್ ಸತ್ತುಹೋದನಂತೆ' ಎಂದು ಯಾರೋ ಹರಡಿದ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತ್ತು! 'ಇಲ್ಲಪ್ಪ, ನಾನು ಚೆನ್ನಾಗಿದ್ದೇನೆ' ಎಂದು ಖುದ್ದು ಬೆಕ್ಹಾಮ್‌ನೇ ಟ್ವೀಟ್ ಮಾಡಬೇಕಾಯಿತು! ಮೂರು ತಿಂಗಳ ಹಿಂದೆ ನಿಜಕ್ಕೂ ಡೇವಿಡ್ ಬೆಕ್ಹಾಮ್ ಮತ್ತು ಆತನ 12ರ ಹರೆಯದ ಮಗ ಬ್ರೂಕ್ಲೀ ಭಾರೀ ಕಾರು ಅಪಘಾತವೊಂದರಲ್ಲಿ ಕೂದಲೆಳೆಯ ಅಂತರದಿಂದ ಗಾಯಗಳಿಲ್ಲದೆ ಪಾರಾಗಿದ್ದರು. ಆದರೆ ಈಗ ಟ್ವೀಟರ್‌ನಲ್ಲಿ ಹುಟ್ಟಿದ್ದು ಬರೀ ಬೊಗಳೆ ಸುದ್ದಿ!

ಬೆಕ್ಹಾಮ್ ಜಗತ್ತಿನ ಅತ್ಯಂತ ಶ್ರೀಮಂತ ಫುಟ್‌ಬಾಲ್ ಆಟಗಾರ. ಆತನ ಒಟ್ಟು ಆಸ್ತಿಯ ಮೊತ್ತ 219 ದಶಲಕ್ಷ ಡಾಲರ್! ಈ ವರ್ಷ ಅತ್ಯಧಿಕ ಸಂಪಾದನೆ ಮಾಡಿದ ಫುಟ್‌ಬಾಲಿಗ ಎಂಬ ದಾಖಲೆಯೂ ಈತನ ಹೆಸರಲ್ಲಿದೆ. 2010ರ ಮೇನಿಂದ 2011ರ ಮೇವರೆಗೆ ಆತನ ಗಳಿಸಿದ ಆದಾಯ 40 ದಶಲಕ್ಷ ಡಾಲರ್! ಅಡಿಡಾಸ್ ಕಂಪೆನಿಯ ಈತನ ಜತೆಗೆ ಮಾಡಿಕೊಂಡಿರುವ ಜಾಹೀರಾತು ಒಪ್ಪಂದ, ಈವರೆಗೆ ಕ್ರೀಡಾ ಜಗತ್ತಿನಲ್ಲೇ ನಡೆದ ಅತ್ಯಂತ ದುಬಾರಿ ಒಪ್ಪಂದವಂತೆ. ಕೋಟಿಗಟ್ಟಳೆ ಹಣ ನೀಡಿ ಸ್ಯಾಮ್‌ಸಂಗ್ ಈತನನ್ನು ತನ್ನ ಜಾಗತಿಕ ರಾಯಭಾರಿ ಎಂದು ಘೋಷಿಸಿದೆ. ಸದ್ಯಕ್ಕೆ ಲಾಸ್‌ಏಂಜಲೀಸ್ ಗ್ಯಾಲಕ್ಸಿ ಕ್ಲಬ್‌ಗೆ ಆಡುತ್ತಿರುವ ಈತ, 36ರ ಹರೆಯ ದಾಟಿದರೂ ಫುಟ್‌ಬಾಲ್ ಮೈದಾನದಲ್ಲಿ ಮಿಂಚಿನ ಪ್ರತಿರೂಪ. ಈತನ ಕಾಲುಗಳಿಗೆ ಮತ್ತು ಕಾಲ ಬೆರಳುಗಳಿಗೆ 70 ದಶಲಕ್ಷ ಡಾಲರ್‌ಗಳ ವಿಮೆ ಇರುವುದು ಇನ್ನೊಂದು ದೊಡ್ಡ ಸುದ್ದಿ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65